ಇ) ಈ ತೆಲಂಗಾಣ ಗಡೀ ಪ್ರಾಂತ್ಯದ ಕರ್ನಾಟಕದ ನಾಗರೀಕರಿಗೆ ಈ ಬಸ್ಸುಗಳ ಅವ್ಯವಸ್ಥೆಯನ್ನು ಸರಿಪಡಿಸಿ ಜನರಿಗೆ ಸಂಚಾರಕ್ಕೆ ಅನುಕೂಲ ಎಂದಿನಿಂದ ಮಾಡಿಕೊಡಲಾಗುವುದು

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ಹೌದು.

ಆ) ಮಾನ್ಯ ಶಾಸಕರ ಕೋರಿಕೆಯ ಮೇರೆಗೆ ಬಹುತೇಕ ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆಯನ್ನು ಸರಿಪಡಿಸಲಾಗಿದೆ.

ಇ) ಹಲವಾರು ಗ್ರಾಮಗಳಿಗೆ ಬಸ್ಸುಗಳು ಸಂಚರಿಸಲು ಯೋಗ್ಯವಿಲ್ಲದ ರಸ್ತೆ ಸಂಪರ್ಕ ಇಲ್ಲವಾದ್ದರಿಂದ ಸಾರಿಗೆ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತಿಲ್ಲ. ರಸ್ತೆಗಳನ್ನು ಸರಿಪಡಿಸಲು ಕ್ರಮ ಜರುಗಿಸಲಾಗುತ್ತಿದ್ದು ಸಂಚಾರಕ್ಕೆ ಯೋಗ್ಯವಾದ ರಸ್ತೆ ಸಂಪರ್ಕ ಒದಗಿಸಿದ ಕೂಡಲೇ ಬಸ್ ಸಂಚಾರವನ್ನು ಒದಗಿಸಲಾಗುವುದು.

ಸೇಡಂ ಕೃಷಿ ಮಾರುಕಟ್ಟೆ ಸಮಿತಿಯ ಅವ್ಯವಹಾರ.

2023(2517)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ(ಸೇಡಂ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕೃಷಿ ಮಾರುಕಟ್ಟೆ ಸಮಿತಿಯ ವತಿಯಿಂದ 1999-2000, 2000-01ನೇ ಸಾಲಿನಲ್ಲಿ ಮಾರುಕಟ್ಟೆ ಆವರಣದಲ್ಲಿ ಆಗಿರುವ ಕಾಮಗಾರಿಗಳು ಹಾಗೂ ಮಾರುಕಟ್ಟೆ ಸಮಿತಿಯ ಹಣದಿಂದ ಬೇರೆ ಬೇರೆ ಕಡೆ ಆಗಿರುವ ಇನ್ನಿತರ ಕಾಮಗಾರಿಗಳು ಯಾವುವು, ಈ ಕಾಮಗಾರಿಗಳಲ್ಲಿ ಅವ್ಯವಹಾರವಾಗಿರುವುದು ನಿಜವಲ್ಲವೇ?

ಆ) ಈ ಕಾಮಗಾರಿಗಳಲ್ಲಿ ಪ್ರತಿಯೊಂದು ಕಾಮಗಾರಿಗೆ ತಗಲಿರುವ ವೆಚ್ಚವೆಷ್ಟು?

ಇ) ಈ ಕಾಮಗಾರಿಗಳಲ್ಲಿ ಅವ್ಯವಹಾರವಾಗಿದ್ದರೆ ಇಲ್ಲಿಯವರೆಗೆ ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ) 1999-2000ನೇ ಸಾಲಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ 'ಎ'ನಲ್ಲಿ ಹಾಗೂ 2000-01ನೇ ಸಾಲಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ 'ಬಿ'ನಲ್ಲಿ ತೋರಿಸಲಾಗಿದೆ.

ಸದರಿ ಕಾಮಗಾರಿಗಳಲ್ಲಿ ಯಾವುದೇ ಅವ್ಯವಹಾರ ಆಗಿರುವುದಿಲ್ಲ.

ಆ) 'ಅ'ನಲ್ಲಿ ಉತ್ತರಿಸಿದೆ.

ಇ) ಉದ್ಭವಿಸುವುದಿಲ್ಲ.

ಅನುಬಂಧ-ಎ

1999-2000ನೇ ಸಾಲಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ ಮತಿಯಿಂದ ಮಾರುಕಟ್ಟೆ ಪ್ರಾಂಗಣ ಹಾಗೂ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ತಗುಲಿರುವ ವೆಚ್ಚ	ಷರಾ
1.	ಆಂತರಿಕ ರಸ್ತೆ ಡಾಂಬರೀಕರಣ	5,71,824-00	-
2.	ಸಮಿತಿ, ಗೋದಾಮು ದುರಸ್ತಿ	45,088-00	-
3.	ನಿವೇಶನ ಸಂಖ್ಯೆ : 28ರಿಂದ 52ವರೆಗಿನ ರಸ್ತೆ ಬದಿಗೆ ಮೆಸನ್ರಿ ಡ್ರೈನ್ ನಿರ್ಮಾಣ	-	ಕಾಮಗಾರಿ ಈಗ ಪ್ರಾರಂಭವಾಗಿದೆ.
4.	ವ್ಯಾಪಾರಸ್ಥರ ಗೋದಾಮು ಮತ್ತು ಸಮಿತಿ ಗೋದಾಮು ಎದುರುಗಡೆ 11 ಡೆಕ್‌ಸ್ಲಾಬ್ ನಿರ್ಮಿಸುವುದು.	-	ಕಾಮಗಾರಿ ಈಗ ಪ್ರಾರಂಭವಾಗಿದೆ
5.	ಹಮಾಲರ ವಸತಿ ಗೃಹಗಳಿಗೆ ಕೂಡು ರಸ್ತೆ	3,00,170-00	-
6.	5(ಐದು) ಚಿಕ್ಕಮಳಿಗೆಗಳು (ರಾಜ್ಯ ಧನ ಸಹಾಯದಡಿಯಲ್ಲಿ)	4,34,934-00	-
7.	ಜೀಪ್ ನಿರ್ಮಾಣ	37,353-00	-
8.	ಮುಳಖೇಡ ಉಪ ಮಾರುಕಟ್ಟೆಯಲ್ಲಿ ಐದು ಕಂಬಗಳಿಗೆ ವಿದ್ಯುದ್ದೀಕರಣಗೊಳಿಸುವುದು	43,672-00	-
	ಒಟ್ಟು	14,33,041-00	

ಅನುಬಂಧ-ಬಿ

2000-01ನೇ ಸಾಲಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ ಮತಿಯಿಂದ ಮಾರುಕಟ್ಟೆ ಪ್ರಾಂಗಣ ಹಾಗೂ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ತಗುಲಿರುವ ವೆಚ್ಚ	ಷರಾ
1.	ರೈತಭವನ ಶೌಚಾಲಯಗಳ ವಿಶೇಷ ದುರಸ್ತಿ	1,42,430-00	-
2.	ಹಮಾಲರ ವಸತಿ ಗೃಹಕ್ಕೆ ವಿದ್ಯುದ್ದೀಕರಣ	77,211-00	-
3.	ಸೇಡಂ ಆಡಳಿತ ಕಛೇರಿ ಕಟ್ಟಡಕ್ಕೆ ಸುಧಾರಣೆ ಮಾಡುವುದು.	-	ಕೆಲಸದ ಆದೇಶ ಈಗ ನೀಡಲಾಗಿದೆ.
4.	ಸೇಡಂ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಇನ್ನು 5 ಚಿಕ್ಕಮಳಿಗೆ ನಿರ್ಮಿಸುವುದು.	-	ಕೆಲಸ ಈಗ ಪ್ರಾರಂಭವಾಗಿದೆ.
5.	ಸೇಡಂ ಪ್ರಾಂಗಣದಲ್ಲಿ ಎನ್.ಜಿ.ಆರ್.ಜಿ ಗೋದಾಮು 2ಕ್ಕೆ ದುರಸ್ತಿ	37,998-00	-
6.	ಸೇಡಂ, ಪ್ರಾಂಗಣಗಳಲ್ಲಿ ಆಂತರಿಕ ರಸ್ತೆಗಳಿಗೆ 5 ಡೆಕ್ಸ್‌ಸ್ಯಾಬ್ ನಿರ್ಮಿಸುವುದು.	-	ಈಗ ಕೆಲಸ ಪ್ರಾರಂಭವಾಗಿದೆ.
7.	ಮಳಖೇಡ ಜಾನುವಾರು ಪ್ರಾಂಗಣದಲ್ಲಿ ರಸ್ತೆಗೆ ಮೆಟಲಿಂಗ್ ರಸ್ತೆ ಉದ್ದಕ್ಕೆ 2 ಬದಿಯಲ್ಲಿ 5 ಮೀ ಅಗಲಕ್ಕೆ ಜಾನುವಾರುಗಳನ್ನು ಕಟ್ಟುವ ಸ್ಥಳದಲ್ಲಿ ಮುರ್ರಂ ಹಾಕುವುದು.	-	ಕೆಲಸದ ಆದೇಶ ಈಗ ನೀಡಲಾಗಿದೆ.
	ಒಟ್ಟು ಮೊತ್ತ	2,57,639-00	